

## ಗೆಲುವಿನ ಹಳಿಗೆ ‘ಡಾಲಿ’

ನಟನೆಯ ಪ್ರತಿಭೆ, ಅದಕ್ಕೆ ಬೇಕಾದ ಮೈಕಟ್ಟು ಎಲ್ಲ ಇದ್ದರೂ ಧನಂಜಯ್ ನಾಯಕನಾಗಿ ನಟಿಸಿದ ಸಿನಿಮಾಗಳು ದೊಡ್ಡ ಯಶಸ್ಸು ಕಾಣಲು ಸಾಧ್ಯವಾಗಲಿಲ್ಲ. ಸಾಲು ಸಾಲು ಸಿನಿಮಾಗಳ ಸೋಲಿನಿಂದ ಬೇಸತ್ತು ಧನಂಜಯ್ ಚಿತ್ರರಂಗವನ್ನೇ ತೊರೆಯುವ ಯೋಚನೆಯನ್ನು ಮಾಡಿದ್ದೂ ಉಂಟಂತೆ. ಹೀಗೆ ಕಂಗೆಟ್ಟಿದ್ದ ಪರಿಸ್ಥಿತಿಯಲ್ಲಿ ಅವರಿಗೆ ಸೂರಿ ಅವರನ್ನು ಕರೆದು ‘ಟಗರು’ ಸಿನಿಮಾದಲ್ಲಿ ಖಳನ ಪಾತ್ರ ಕೊಟ್ಟರು. ‘ಡಾಲಿ’ ಪಾತ್ರದಲ್ಲಿ ಧನಂಜಯ್ ನಟನೆಗೆ ಸಾಕಷ್ಟು ಮೆಚ್ಚುಗೆಯೂ ವ್ಯಕ್ತವಾಯ್ತು. ಖಳನಾಗಿ ಅವರು ನೀಡಿದ ಖಡಕ್ ಲುಕ್ ಅವರನ್ನು ರಾಮ್‌ಗೋಪಾಲ್ ವರ್ಮಾ ಅವರನ್ನೂ ಮೆಚ್ಚಿಸಿದೆ. ಮೆಚ್ಚಿದ್ದಷ್ಟೇ ಅಲ್ಲ, ತಮ್ಮ ಶಿಷ್ಯನೊಬ್ಬ ನಿರ್ದೇಶಿಸುತ್ತಿರುವ ‘ಭೈರವಗೀತ’ಕ್ಕೆ ನಾಯಕನಾಗಿ ಆಯ್ಕೆ ಮಾಡಿದ್ದು ಹಳೆಯ ಸುದ್ದಿ. ಸೂರಿ ಕೂಡ ಧನಂಜಯ್ ಅವರನ್ನು ಇಟ್ಟುಕೊಂಡು ‘ಪಾಪ್‌ಕಾರ್ನ್ ಮಂಕಿ ಟೈಗರ್’ ಎಂಬ ವಿಚಿತ್ರ ಹೆಸರಿನ ಸಿನಿಮಾ ಮಾಡುತ್ತಿದ್ದಾರೆ.

‘ಭೈರವಗೀತ’ ಚಿತ್ರದಲ್ಲಿ ಧನಂಜಯ್ ರಕ್ತಸಿಕ್ತ ಮುಖದ ಲುಕ್, ನಾಯಕಿ ಐರಾ ಜತೆಗಿನ ಪ್ರಣಯದ ದೃಶ್ಯಾವಳಿಗಳೂ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಯಾಗುತ್ತಿದೆ. ಭೂಮಾಲೀಕರು ಮತ್ತು ಕೂಲಿವರ್ಗದ ಜನರ ನಡುವೆ ನಡೆಯುವ ಸಂಘರ್ಷವೇ ‘ಭೈರವಗೀತ’ದ ಕಥೆಯಂತೆ. ಆ ನೆತ್ತರಕಥೆಯ ನಡುವೆ ಕೆಂಡಸಂಪಿಗೆಯ ಕಂಪಿನ ಒಂದು ಪ್ರೇಮದ ಎಳೆಯೂ ಇದೆ.

ಎರಡು ಭಾಷೆಗಳಲ್ಲಿ ಬಿಡುಗಡೆಯಾಗಲಿರುವ ಈ ಸಿನಿಮಾದ ಕುರಿತು ಧನಂಜಯ್ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಹಲವು ಸೋಲುಗಳ ನಂತರ ಗೆಲುವಿನ ಹಳಿಗೆ ಹತ್ತುತ್ತಿರುವ ವೃತ್ತಿಜೀವನದ ವೇಗವರ್ಧನೆಯ ನಿಟ್ಟಿನಲ್ಲಿ ಸದ್ಯಕ್ಕೆ ಅವರ ಗಮನವಿದೆ.

## ಅಯೋಗ್ಯನ ಸುಯೋಗ!

ನಟ ನೀನಾಸಂ ಸತೀಶ್ ಜನಪ್ರಿಯತೆ ಗಳಿಸಿದ್ದು ‘ಮನಸಾರೆ’ ಚಿತ್ರದ ಮೂಲಕ. ‘ಲೂಸಿಯಾ’ ಚಿತ್ರದ ಮೂಲಕ ನಾಯಕನಾದ ಅವರು ನಂತರ ‘ರಾಕೆಟ್’ ಚಿತ್ರಕ್ಕೆ ಹಣಕಾಸಿನ ಇಂಧನ ತುಂಬಿ ಹಾರುವ ಪ್ರಯತ್ನವನ್ನೂ ಮಾಡಿ ಕೈಸುಟ್ಟುಕೊಂಡರು. ಮತ್ತೆ ಅವರ ಕೈಹಿಡಿದಿದ್ದು ಜಯತೀರ್ಥ ನಿರ್ದೇಶನದ ‘ಬ್ಯೂಟಿಫುಲ್ ಮನಸುಗಳು’. ನಂತರ ತೆರೆಕಂಡ ‘ಟೈಗರ್ ಗಲ್ಲಿ’ ಕಾಗದದ ಹುಲಿಯ ಹಾಗೆ ನುಚ್ಚಾಗಿ ಹೋಯ್ತು. ಹೀಗೆ ಏಳುಬೀಳುಗಳನ್ನು ಸಮಸಮವಾಗಿ ಕಂಡುಕೊಳ್ಳುತ್ತ ಬೆಳೆಯುತ್ತಿದ್ದಾರೆ ಸತೀಶ್.

ಈಗ ‘ಅಯೋಗ್ಯ’ ಅವರ ಕೈ ಹಿಡಿದಿದ್ದಾನೆ. ಹಲವು ಚಿತ್ರಮಂದಿರಗಳಲ್ಲಿ ಐವತ್ತು ದಿನ ಪ್ರದರ್ಶನ ಕಂಡು ಮುನ್ನುಗ್ಗುತ್ತಿರುವ ‘ಅಯೋಗ್ಯ’ ಸತೀಶ್ ಪಾಲಿಗೆ ಸುಯೋಗ ತಂದಿಕ್ಕಿದೆ. ಈ ಚಿತ್ರದ ಯಶಸ್ಸಿನ ನಂತರ ಸತೀಶ್ ಸಂಭಾವನೆಯಲ್ಲಿಯೂ ದೊಡ್ಡ ಜಿಗಿತ ಕಂಡಿದೆಯಂತೆ. ಈ ಜಿಗಿತ ಕೋಟಿಯ ಗಡಿರೇಖೆಯನ್ನೂ ಮೀರಿದೆ ಎನ್ನಲಾಗುತ್ತಿದೆ.

ಸತೀಶ್ ಕೈಯಲ್ಲೀಗ ಮೂರು ಸಿನಿಮಾಗಳಿವೆ: ‘ಗೋಧ್ರಾ’, ‘ಚಂಬಲ್’, ‘ರಾಮನು ಕಾಡಿಗೆ ಹೋದನು’. ಈ ಮೂರು ಚಿತ್ರಗಳ ಮೀಟುಗೋಲು ಬಳಸಿಕೊಂಡು ‘ಸೂಪರ್ ಸ್ಟಾರ್’ ಪಟ್ಟ ಮುಟ್ಟುವ ಕನಸು ಅವರ ಕಂಗಳಲ್ಲಿ ಮಿನುಗುತ್ತಿದೆ.

